ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಇದುವರೆಗೆ ಪಹಣೀ ಲೆಕ್ಕದ ಆಧಾರದ ಮೇಲೇ ಇವನ್ನು ನಿರ್ಧರಿಸಿ ಕೊಡುಬಂದದ್ದು; ಆದರಿಂದ ಜನಸಾಮಾನ್ಯರಿಗೆ ತೊಂದರೆಯಾಗಿದ್ದರೆ ಅದಕ್ಕೆ ಯಾರು ಜವಾಬ್ದಾರರು ?

ಶ್ರೀ ಕಡಿದಾಳ್ ಮಂಜಪ್ಪ.—ಪಹಣೀ ಲೆಕ್ಕದ ಆಧಾರ ಒಂದೇ ಅಲ್ಲ; distress condition ವಿಚಾರವನ್ನು ಗಣನೆಗೆ ತೆಗೆದುಕೊಂಡು ಅನಂತರ ವರದಿಮಾಡಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗಾದರೆ ಈಗ ಹೊನ್ನಾಳಿ ತಾಲ್ಲೂಕಿನಲ್ಲಿ ಆಹಾರ ಸಾವಗ್ರಿಗಳನ್ನೊದಗಿಸಲು ಸರ್ಕಾರದ ಡಿಪೋ ಪ್ರಾರಂಭಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.— ಎಲ್ಲಾಕಡೆಯೂ ಪ್ರಾರಂಭಿಸಿರುವಂತೆ ಅಲ್ಲಿಯೂ ಪ್ರಾರಂಭಿಸಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಬಹಳ ಬೆಳೆ ಆಗಿದ್ದರೆ ಈ ಡಿಪೋ ಆವಶ್ಯಕತೆ ಏನಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ಡಿಪೋಗಳನ್ನು ಇಟ್ಟಿರುವ ವಿಚಾರವನ್ನು ತಾವು ಆ ದೃಷ್ಟಿಯಿಂದ ನೋಡಬಾರದು. ಜನರ ಅನುಕೂಲಕ್ಕಾಗಿ ಡಿಪೋಗಳನ್ನು ತೆರೆದ್ದೇವೆ.

ಶ್ರೀ ಎಚ್. ಎಸ್. ರುದ್ರಪ್ಪ. ಈ ಡಿಪೋಗಳು ಇದ್ದಮಾತ್ರಕ್ಕೆ ಹೆಚ್ಚು ಧಾನ್ಯ ಖರ್ಚಾಗುತ್ತದೆಂಬುದು ತಮ್ಮ ಅಭಿಪ್ರಾಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಡಿಪೋಗಳನ್ನು ತೆಗೆದಿರುವುದು ಮುಖ್ಯವಾಗಿ ಧಾನ್ಯಗಳ ಬೆಲೆಯನ್ನು stabilise ಮಾಡಿಕೊಳ್ಳುವುದಕ್ಕಾಗಿ.

ಶ್ರೀ ಎಚ್. ಎಸ್. ರುದ್ರಪ್ಪ.— ಈ ಡಿಪೋಗಳ ಧಾರಣೆಗಿಂತಲೂ ಹೊರಗೆ ಧಾನ್ಯಗಳ ಬೆಲೆಯು ಇಳಿವರಿಗೆ ಬಂದು ಡಿಪೋಗಳ ಮೂಲಕ ಧಾನ್ಯಗಳು ಸರಬರಾಯಿ ಆಗುತ್ತಿರುವುದರಿಂದ ಜನರಿಗೆ ತೊಂದರೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ತೊಂದರೆಯಾಗಿರುವುದು ಕಂಡುಬಂದಿಲ್ಲ. ಮಾನ್ಯ ಸದಸ್ಯರು ತಿಳಿಸಿದ ಅಂಶವನ್ನು ವಿಚಾರಿಸುತ್ತೇನೆ.

Scheme to start a Regulated Market in Bangalore.

Q.—355. Sri A. V. NARASIMHA REDDY (Bangalore South).—

Will the Government be pleased to state :—

(*a*) whether there are represenitatons to bring the market of Bangalore under the scheme of Regulated Markets ;

(*b*) the steps they have taken to implement this scheme ?

A.—Dr. R. NAGAN GOWDA (Minister for Agriculture).—

(*a*) Yes.

(*b*) A scheme for the starting of a Regulated Market at Bangalore for several important agricultural commodities such as, Potatoes, Onions, Tamarind, Groundnuts, Chillies, Jaggery, etc., is under consideration of Government.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಒಂದನ್ನು ಸ್ಥಾಪಿಸಲು ಸರ್ಕಾರದವರು ಕೈಗೊಳ್ಳಬೇಕೆಂದಿರುವ ಕಾರ್ಯಕ್ರಮವೇನು ?

ಡಾ॥ ಆರ್. ನಾಗನ ಗೌಡ.—ಈ ಬಗ್ಗೆ ಸ್ಥಳೀಯ ಸಂಸ್ಥೆಯ ಅಭಿಪ್ರಾಯವೇನೆಂದು ಸರ್ಕಾರದವರು ಕೇಳಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಒಂದು ವೇಳೆ ಸ್ಥಳೀಯ ಸಂಸ್ಥೆಯವರು ಇದು ಬೇಕಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಆಗ ಸರ್ಕಾರದವರು ಏನು ಮಾಡುತ್ತಾರೆ ?

ಡಾ॥ ಆರ್. ನಾಗನ ಗೌಡ.—ಆ ರೀತಿ ಅಭಿಪ್ರಾಯ ಸ್ಥಳೀಯ ಸಂಸ್ಥೆಗಳಿಂದ ಬರುತ್ತೆ ಎಂದು ಸರ್ಕಾರ ನಿರೀಕ್ಷಿಸಿಲ್ಲ. ಈ ಏರ್ಪಾಡಿನಿಂದ ಎಲ್ಲರಿಗೂ ಫಲಕಾರಿಯಾಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ಇದರಿಂದ ವರ್ತಕರಿಗೆ ಲಾಭದಾಯಕ ದೃಷ್ಟಿಯಿಂದ ತೊಂದರೆ ಆಗುತ್ತದೆಂಬುದನ್ನು ಸರ್ಕಾರದವರು ಭಾವಿಸಿಲ್ಲವೇ ?

ಡಾ॥ ಆರ್. ನಾಗನ ಗೌಡ.—ಭಾವಿಸಿಲ್ಲ ; ಇದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇದೊಂದು ವೇಳೆ ಲಾಭದಾಯಕವಲ್ಲವೆಂಬ ದೃಷ್ಟಿಯಿಂದ ವರ್ತಕರೆಲ್ಲ ಇದು ಬೇಡವೆಂದು ನಿರ್ಧರಿಸಿದರೆ ಈ ಬಗ್ಗೆ ಈಗ ಜಾರಿಯಲ್ಲಿರುವ ಕಾನೂನು ತಿದ್ದುಪಡಿಮಾಡಿಯಾದರೂ ಈ ರೆಗ್ಯುಲೇಟೆಡ್ ಮಾರ್ಕೆಟ್ ಏರ್ಪಡಿಸುತ್ತೀರಾ ?

ಡಾ॥ ಆರ್. ನಾಗನ ಗೌಡ.—ಕಾರ್ಪೋರೇಷನ್ನಿನಲ್ಲಿ ವರ್ತಕರ ಪರ ಇರುವವರು ಮಾತ್ರವೇ ಇಲ್ಲ. ಜನ ಹಿತಕಾಂಕ್ಷಿಗಳೂ ಇದ್ದಾರೆ. ಆದ್ದರಿಂದ ನಾವು ಆ ರೀತಿ ಭಯಪಡಬೇಕಾಗಿಲ್ಲ.

Foreign Trained Officers in the Department of Animal Husbandry.

Q.—356. Sri A. V. NARASIMHA REDDY (Bangalore South).—

Will the Government be pleased to state :—

(*a*) how many candidates trained in foreign countries are available in the Department of Animal Husbandry and how their services are utilised ;

(*b*) when the post of Animal Husbandry Research Officer was created and filled up and what is the nature of the post ;

(*c*) whether there is a post of Veterinary Research Officer at the Serum Institute, Mysore ; if so, how it is disposed of ?